**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತನಾಲ್ಕನೆಯ ಅಧಿವೇಶನ**

# ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–50)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾವಾದ ರೂಪದಲ್ಲಿ)**

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 35)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ( ಎರಡನೇ ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 3ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 3ಎ ಪ್ರಕರಣದ (1ಎ) ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“(1ಬಿ) ಮೋಟಾರು ವಾಹನಗಳ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ 59)ರ ಉಪಬಂದಗಳ ಅಡಿಯಲ್ಲಿ ನೋಂದಣಿಯಾದ ಮೋಟಾರು ವಾಹನಗಳಿಗೆ 3ನೇ ಪ್ರಕರಣದಡಿಯಲ್ಲಿ ವಿಧಿಸಲಾದ ತೆರಿಗೆಯ ಜೊತೆಗೆ, ಹೆಚ್ಚುವರಿ ಉಪಕರವನ್ನು ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ನಿಧಿಯ ಉದ್ದೇಶಕ್ಕಾಗಿ ಸಾರಿಗೇತರ ವಾಹನಗಳ ನೋಂದಣಿ ಸಮಯದಲ್ಲಿ ದ್ವಿಚಕ್ರ ವಾಹನಗಳಿಗೆ ಐದು ನೂರು ರೂಪಾಯಿಗಳು ಹಾಗೂ ಮೋಟಾರು ಕಾರುಗಳಿಗೆ ಒಂದು ಸಾವಿರ ರೂಪಾಯಿಗಳನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

**ವಿವರಣೆ:** ಈ ಉಪ-ಪ್ರಕರಣದ ಉದ್ದೇಶಕ್ಕಾಗಿ ’ಸಾರಿಗೇತರ ವಾಹನ’ ಎಂದರೆ ಮೋಟಾರು ವಾಹನಗಳ ಅಧಿನಿಯಮ, 1988ರ ಉಪಬಂಧಗಳಡಿ ಕೇಂದ್ರ ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಿದಂತೆ ಇರುವುದು”.

**3. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** (1) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ಅಧಿನಿಯಮ, 2024ರ ಉಪಬಂಧಗಳನ್ನು ಜಾರಿಗೆ ತರುವಾಗ, ಯಾವುದೇ ತೊಂದರೆಗಳು ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ತೊಂದರೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವಂಥ ಉಪಬಂಧಗಳನ್ನು ಕಲ್ಪಿಸಬಹುದು:

ಪರಂತು, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ಅಧಿನಿಯಮ, 2024ರ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯಗೊಂಡ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಉಪಪ್ರಕರಣ (1)ರಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು.

ಈ ವಿಧೇಯಕವು ಭಾರತ ಸಂವಿಧಾನದ 199ನೇ ಅನುಚ್ಛೇಧದ ಅರ್ಥವ್ಯಾಪ್ತಿಯ ಮೇರೆಗೆ ಒಂದು ಧನ ವಿಧೇಯಕವೆಂದು ಪ್ರಮಾಣೀಕರಿಸುತ್ತೇನೆ.

**ಸಭಾಧ್ಯಕ್ಷರು**

ಕರ್ನಾಟಕ ವಿಧಾನಸಭೆ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ನಿಧಿಯ ಉದ್ದೇಶಕ್ಕಾಗಿ, ವಾಹನಗಳ ನೋಂದಣಿ ಸಮಯದಲ್ಲಿ ದ್ವಿಚಕ್ರ ವಾಹನಗಳಿಗೆ ಐದು ನೂರು ರೂಪಾಯಿಗಳ ಮತ್ತು ಸಾರಿಗೇತರ ಮೋಟಾರು ಕಾರುಗಳ ಮೇಲೆ ಒಂದು ಸಾವಿರ ರೂಪಾಯಿಗಳ ಹೆಚ್ಚುವರಿ ಉಪಕರವನ್ನು ವಿಧಿಸಲು ಮತ್ತು ಸಂಗ್ರಹಿಸಲು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 35)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ರಾಮಲಿಂಗಾ ರೆಡ್ಡಿ**
ಸಾರಿಗೆ ಮತ್ತು ಮುಜರಾಯಿ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**

**ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ 1957ರ**

**(1957ರ ಕರ್ನಾಟಕ ಅಧಿನಿಯಮ 35ರ) ಉದ್ಧೃತ ಭಾಗ**

**XX XX XX**

**3. 3ಎ ಉಪಕರವನ್ನು ವಿಧಿಸುವುದು.- (1)** ಮೋಟಾರು ವಾಹನಗಳ ಅಧಿನಿಯಮ, 1988(1988ರ ಕೇಂದ್ರ ಅಧಿನಿಯಮ 59)ರ ಅಡಿಯಲ್ಲಿ ನೋಂದಾಯಿತವಾದ ಮೋಟಾರು ವಾಹನಗಳ ಮೇಲೆ 3ನೇ ಪ್ರಕಣದ ಅಡಿಯಲ್ಲಿ ವಿಧಿಸಲಾದ ತೆರಿಗೆಯ ಮೇಲೆ ಶೇಕಡಾ ಹನ್ನೊಂದರ ದರದಲ್ಲಿ ಉಪಕರ ವಿಧಿಸಿ ವಸೂಲು ಮಾಡತಕ್ಕದ್ದು ಮತ್ತು ಆ ಪೈಕಿ ಶೇಕಡಾ 10ರಷ್ಟು ಹಣವನ್ನು, ಅನುಕ್ರಮವಾಗಿ 57:28:15ರ ಪ್ರಮಾಣದಲ್ಲಿ ರಾಜ್ಯದ ಎಲ್ಲೆಡೆ ವಿವಿಧ ಮೂಲ ಸೌಕರ್ಯ ಯೋಜನೆಗಳ ಉದ್ದೇಶಕ್ಕಾಗಿ, ಬೆಂಗಳೂರು ಕ್ಷಿಪ್ರ ಸಾರಿಗೆ ಸಮೂಹ ನಿಯಮಿತದಲ್ಲಿ ಈಕ್ವಿಟಿ ಷೇರು ಹೂಡಿಕೆಗಾಗಿ ಮತ್ತು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯ ಸ್ಥಾಪನೆಗಾಗಿ ಮತ್ತು ಉಳಿದ ಶೇಕಡಾ1ರಷ್ಟು ನಗರಸಾರಿಗೆ ನಿಧಿ ಉದ್ದೇಶಕ್ಕಾಗಿ ಗೊತ್ತುಪಡಿಸತಕ್ಕದ್ದು.

(1ಎ) ಮೋಟಾರು ವಾಹನಗಳ ಅಧಿನಿಯಮ 1988(1988ರ ಕೇಂದ್ರ ಅಧಿನಿಯಮ 59)ರ ಅಡಿಯಲ್ಲಿ ನೋಂದಣಿಯಾದ ಮೋಟಾರು ವಾಹನಗಳಿಗೆ 3ನೇ ಪ್ರಕರಣದಡಿಯಲ್ಲಿ ವಿಧಿಸಿದ ತೆರಿಗೆಗೆ ಹೆಚ್ಚುವರಿಯಾಗಿ, ಕರ್ನಾಟಕ ಮೋಟಾರು ಸಾರಿಗೆ ಮತ್ತು ಅದಕ್ಕೆ ಸಂಬಂಧಿತ ನೌಕರರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ನಿಧಿಯ ಉದ್ದೇಶಕ್ಕಾಗಿ 3% ರಷ್ಟು ಹೆಚ್ಚುವರಿ ತೆರಿಗೆಯನ್ನು ವಿಧಿಸತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ಕ್ಯಾಂಪ್ ಬೆಳಗಾವಿ, ಪಿ7, ಕಾಸೂ , ಪ್ರತಿಗಳು 600, 15 ಡಿಸೆಂಬರ್2024

KARNATAKA LEGISLATIVE COUNCIL
ONE HUNDRED AND FIFTY FOURTH SESSION

# THE KARNATAKA MOTOR VEHICLES TAXATION (SECOND AMENDMENT) BILL, 2024

**(LA Bill No. 50 of 2024)**
**(As passed by the Karnataka Legislative Assembly)**

A Bill further to amend the Karnataka Motor Vehicles Taxation Act, 1957.

Whereas it is expedient further to amend the Karnataka Motor Vehicles Taxation Act, 1957 (Karnataka Act 35 of 1957) for the purpose hereinafter appearing:

Be it enacted by the Karnataka State Legislature in the seventy fifth year of the Republic of India as follows:

**1. Short title and commencement.-** (1) This Act may be called the Karnataka Motor Vehicles Taxation (Second Amendment) Act, 2024.

(2) It shall come into force from such date as the State Government may, by notification in the official Gazette, appoint.

**2. Amendment of section 3A.-** In the Karnataka Motor Vehicles Taxation Act, 1957 (Karnataka Act 35 of 1957) in section 3A, after sub-section (1A), the following shall be inserted, namely:-

"(1B) In Addition to the existing cess of the tax levied under section 3 on the Motor Vehicles registered under the provisions of the Motor Vehicles Act, 1988 (Central Act 59 of 1988), additional cess of Rupees Five Hundred for two wheeler and Rupees One Thousand for Motor Cars shall be levied and collected on the non-transport vehicles at the time of registration for the purpose of the Karnataka Motor Transport and other Allied Workers Social Security and Welfare Fund.

**Explanation:** For the purpose of this sub-section 'non-transport vehicles' means as specified by a Notification by the Central Government under the provisions of the Motor Vehicles Act, 1988."

**3. Power to remove difficulty.-** (1) If any difficulty arises in giving effect to the provisions of the Karnataka Motor Vehicles Taxation (Second Amendment) Act, 2024, the State Government may by notification in the Official Gazette, make such provisions as may appear to it to be necessary or expedient for purpose of removing the difficulty:

Provided that, no such order shall be made after the expiry of a period of two years from the date of commencement of the Karnataka Motor Vehicles Taxation (Second Amendment) Act, 2024.

(2) Every order made under sub-section (1), shall as soon as after it is made, be laid before the State Legislature.

I hereby sertify that this Bill is a Money Bill within the meaning of Article 199 of the Constitution of India.

**Speaker**

Karnataka Legislative Assembly

## STATEMENT OF OBJECTS AND REASONS

**(As appended to at the time of introduction)**

It is considered necessary further to amend the Karnataka Motor Vehicles Taxation Act, 1957 (Karnataka Act 35 of 1957) to impose and collect an additional cess of rupees five hundred on two wheeler and rupees one thousand on Motor cars of non-transport vehicles at the time of registration for the purpose of the Karnataka Motor Transport and other Allied Workers Social Security and Welfare Fund.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**RAMALINGA REDDY**
Minister for Transport and Muzrai

**K.R. MAHALAKSHMI**
Secretary
Karnataka Legislative Council

**ANNEXURE**
**THE EXTRACT FROM THE KARNATAKA MOTOR VEHICLES TAXATION ACT, 1957**
**(KARNATAKA ACT 35 OF 1957)**

**XXX** **XXX** **XXX**

**3A. Levy of cess.-** (1) There shall be levied and collected by way of cess, at the rate of eleven percentum of the tax levied under section 3 on the Motor Vehicles registered under Motor Vehicles Act, 1988 (Central Act 59 of 1988) out of which ten percentum shall be for the purpose of various infrastructure projects across the State, equity in investment in Bangalore Mass Rapid Transit Limited, the Mukhya Manthri Grameena Rasthe Abhivruddhi Nidhi, in the proportion of 57:28:15 respectively and one percentum for the purpose of Urban Transport Fund.

(1A) In addition to the existing cess of the tax levied under Section 3 on the Motor Vehicles registered under the Motor Vehicles Act,1988 (Central Act 59 0f 1988), 3% additional cess shall be levied and collected on the transport vehicles for the purpose of the Karnataka Motor Transport and Other Allied Workers Social Security and Welfare Fund.

**XXX** **XXX** **XXX**

Govt. Press, Suvarna Vidhana Soudha, Belagavi camp, 16th Dec, 2024, P7, W.D. , Copies 300